ವಿಜಯ್ ನರಹರಿ, ಆಸುಂಡಿ
*ಗುರುವೇ, ಈ ಮೋಹಿನಿ, ಪಿಶಾಚಿ, ದೆವ್ವಗಳೆಲ್ಲ ಬಿಳಿ ಸೀರೆಯನ್ನೇ ಉಡಲು ಕಾರಣವೇನು?*



ಅಮಾವಾಸ್ಯೆಯ ಬ್ಲ್ಯಾಕ್ ಬ್ಯಾಕ್‌ಗ್ರೌಂಡ್‌ಗೆ ವೈಟ್ ಸ್ಯಾರೀನೇ ಮ್ಯಾಚಿಂಗ್ ಡ್ರೆಸ್!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಅವನು ಹಟಮಾರಿ, ಅವಳು ಬಜಾರಿ, ಅವರ ಮಕ್ಕಳು?*
ಟೆನಿಸ್ ಕ್ರೀಡೆಯಲ್ಲಿನ ಚೆಂಡಿನಂತೆ ಇತ್ತಿಂದತ್ತ, ಅತ್ತಿಂದಿತ್ತ!

ಕೆ. ಮೈಥಿಲಿಕೃಷ್ಣ, ಬೆಂಗಳೂರು
*ಕನ್ನಡನಾಡಿನಲ್ಲಿ ಹುಟ್ಟಿದ್ದಕ್ಕೆ ನಿಮಗೆ ಸಂತೋಷವೆ, ದುಃಖವೆ?*
ಹುಟ್ಟಿದ್ದಕ್ಕೆ ಸಂತೋಷ, ಬೆಳೆದುದಕ್ಕೆ ದುಃಖ – ನಮ್ಮಲ್ಲಿ ಸಾಹಿತ್ಯ, ಕಲೆಗೆ ಮನ್ನಣೆ ಬಹಳ ಕಡಿಮೆ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಶ್ರೀರಾಮನ ವನವಾಸಕ್ಕೂ, ಮಂತ್ರಿಗಳ ಸೆರೆವಾಸಕ್ಕೂ ಇರುವ ವ್ಯತ್ಯಾಸವೇನು?*




ವನವಾಸಕ್ಕೆ ಹಿನ್ನೆಲೆ ಲೋಕೋದ್ಧಾರ; ಸೆರೆವಾಸಕ್ಕೆ ಹಿನ್ನೆಲೆ ಲೋಕಾಯುಕ್ತ!

ಎಂ.ಎನ್. ಸೋಮಶೇಖರ್, ಮೈಸೂರು
*ಸಾವು ಅರ್ಥವಾಗದಿದ್ದರೆ ಜೀವನದ ಮಹತ್ವ ತಿಳಿಯುವುದಿಲ್ಲ ಎಂದರೇನು?*
insecurity ಇಲ್ಲದವನು insurance ಮಾಡಿಸುವುದಿಲ್ಲ ಎಂದು!

ರವೀಂದ್ರನಾಥ ಶಿ, ಯಡಹಳ್ಳಿ, ಬೀಳಗಿ
*ಜೋಡಿ ಜಡೆಗೂ, ಜೋಡಿ ಜಮೀನ್ದಾರರಿಗೂ ಇರುವ ವ್ಯತ್ಯಾಸವೇನು ಗುರು?*
ಏನೇನೂ ಇಲ್ಲ; ಎರಡು ಕಡೆಯೂ ಬಾಚಿಕೊಂಡಷ್ಟೂ ಚೆನ್ನ!

ಎ.ಎಸ್. ಸ್ವಾಮಿ, ಶೋರಾಪುರ
*ನಮ್ಮ ಬಾಳಿನ ಕಾಮಧೇನು, ಕಲ್ಪವೃಕ್ಷಗಳಾವುವು?*
ವರದಕ್ಷಿಣೆ, ಮಾವನ ವಿಲ್!

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ
*ಬಿಳಿ ಕೂದಲು ಬುದ್ಧಿವಂತಿಕೆಯ ಸಂಕೇತವೆಂದು ನನ್ನ ಸ್ನೇಹಿತನ ವಾದ, ನೀವೇನಂತೀರಿ...?*
ಗುಡ್. ಅಲ್ಲಿಗೆ ಜೂಲುನಾಯಿ, ಬಿಳಿಕರಡಿ, ಮೊಲಗಳು ಬಹಳವೇ ಬುದ್ಧಿವಂತರೆಂದಾಯಿತು!

ಡಿ.ಕೆ. ರಾಜ್, ಗದಗ
*ನಮ್ಮ ದೇಶದಲ್ಲಿ ರಾಜಕೀಯ ಕಂಡುಹಿಡಿದವರು ಯಾರು?*
ನಾರದ!

ಬಿ.ಎಸ್. ಮಳ್ಳೂರ, ಹಲಗತ್ತಿ
*ಡಾಕ್ಟರ್‌ಗೂ, ಸ್ಕ್ಯಾನಿಂಗ್ ಸೆಂಟರ್‌ಗೂ ಏನು ಸಂಬಂಧವಿದೆ?*
ಸಿಂಹ– ನರಿಯ ಸಂಬಂಧ; ಇವರು ತಿಂದು ಬಿಟ್ಟ ಎಂಜಲು ಅವರಿಗೆ ಆಹಾರ!

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಯಲಹಂಕ
*ಕನ್ನಡ, ಕನ್ನಡಿ ಎರಡಕ್ಕೂ ಇರುವ ವ್ಯತ್ಯಾಸವೇನು?*
ಕನ್ನಡ ನಾಡಿಗೆ ಅವಶ್ಯ, ಕನ್ನಡಿ ಲೇಡಿಗೆ ಅವಶ್ಯ!

ನರಸಿಂಹ ಎಂ. ಪೈ, ಕಾಸರಕೋಡ
*ಬದುಕು ಹೂವಿನ ಗಾದಿಯಲ್ಲ, ಮುಳ್ಳಿನ ಹಾದಿ. ಏಕೆ?*
ಜೀವನ ಕಾಲದ ಅಧೀನ, ಕಾಲ ಗಡಿಯಾರದ ಅಧೀನ, ಗಡಿಯಾರ ಮುಳ್ಳಿನ ಅಧೀನವಾದ್ದರಿಂದ!

ಆರ್.ಎಂ. ಪೈ, ಹೊನ್ನಾವರ
*ಏರಿದ್ದು ಇಳಿಯಲೇ ಬೇಕು ಎನ್ನುವುದು ಬಂಗಾರದ ಬೆಲೆಗೆ ಏಕೆ ಅನ್ವಯಿಸುವುದಿಲ್ಲ?*
ನೆಕ್‌ಲೇಸ್ ಆಗುವ ಲೋಹಕ್ಕೆ ಕುತ್ತಿಗೆಗೆ ಬರುವಂತಹುದೇ ಬೆಲೆ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅಲ್ರಪ್ಪೋ! ಸರಕಾರದವರು ಯಾವತ್ತೂ ಸಾರಿಗೆ ಸಪ್ತಾಹ ಮಾಡುತ್ತಾರಲ್ಲಾ, ಅನ್ನಕ್ಕೆ ಯಾವಾಗ ಸಪ್ತಾಹ ಸ್ವಾಮಿ?*
ಅನ್ನಕ್ಕೆ ಇಡೀ ವರ್ಷವೇ ಇರುತ್ತಲ್ಲಾ... ಅವರಿರೋದೇ ಅವರಿವರನ್ನ ಅನ್ನಕ್ಕೆ!

## ಬಹುಮಾನಿತ ಪ್ರಶ್ನೆ

ಪಿ.ಜೆ. ರಾಘವೇಂದ್ರ, ಮೈಸೂರು
*ಲೋಕಾಯುಕ್ತರು ಎನ್‌ಕೌಂಟರ್ ಮಾಡುವಂತಿದ್ರೆ...?*
ಸದನದಲ್ಲಿ ದಿನಕ್ಕೊಂದು ಶ್ರದ್ಧಾಂಜಲಿ ಸಭೆ ಇರುತ್ತಿತ್ತು!

ಹಾಡ್ಯ ಜಯಾನಂದ, ಮೈಸೂರು
*ಎದಿರು ಹಳಿಯಲು ಬೇಡ ಎಂದರು ಬಸವಣ್ಣನವರು, ನಿಂದಕರಿರಬೇಕು ಎಂದರು ದಾಸರು. ನೀವೇನಂತೀರಿ?*
ನಿಂದಕರಿರಬೇಕು, ಆದರೆ ಎದಿರು ಹಳಿಯ ಬದಲು ಪಕ್ಕದ ಹಳಿಯಲ್ಲಿದ್ದರೆ ಬೇಕಾದಾಗ ಟ್ರ್ಯಾಕ್ ಚೇಂಜ್ ಮಾಡಬಹುದು!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಊಟಕ್ಕೆ ಬಡಿಸುವ ಮುನ್ನ ಉಪ್ಪು, ಉಪ್ಪಿನಕಾಯಿ ಮೊದಲು ಬಡಿಸುವುದೇಕೆ ರಾಮ್‌ಜೀ ಸರ್?*
ಋಣಕ್ಕೊಂದು, ಗುಣಕ್ಕೊಂದು!

ಗಾಯತ್ರಿ, ರಾಜಾಜಿನಗರ
*ಮಕ್ಕಳಿಗೆ ಮೊಬೈಲ್‌ನಲ್ಲಿ ಮಾತನಾಡಲು ಸಮಯವಿರುತ್ತೆ, ಹೆತ್ತವರೊಡನೆ ಮಾತನಾಡಲು ಸಮಯವಿರುವುದಿಲ್ಲ, ಏಕೆ?*




ಅಲ್ಲಿ ಫ್ರೀ ಟಾಕ್ ಟೈಂ ಹೆಚ್ಚಾದುದರಿಂದ ಇಲ್ಲಿ ಟಾಕ್ ಮಾಡಲು ಅವರು ಫ್ರೀ ಇರುವುದಿಲ್ಲ!

ಸವಿರವಿ, ಕೊಪ್ಪ
*ಆಹಾರ ಎಲ್ಲೇ ಇದ್ದರೂ ಇರುವೆ ಬಂದು ಮುತ್ತಿಕೊಳ್ಳುತ್ತದಲ್ಲ, ಅದಕ್ಕೆ ಆಹಾರ ಇಲ್ಲೇ ಇದೆ ಎಂದು ಹೇಗೆ ಗೊತ್ತಾಗುತ್ತದೆ?*
ಲೇಡೀಸ್ ಹಾಸ್ಟೆಲ್ ಎಂಬ ಬೋರ್ಡಿಲ್ಲದಿದ್ದರೂ ಪಡ್ಡೆ ಹುಡುಗರಿಗೆ ಗೊತ್ತಾಗುವಂತೆ!

ರಾಮ್